# ರೇಖಾ ಹೇಳಿದ ಸತ್ಯ...



ಬಿಟೌನ್‌ನ ಅಮರ ಪ್ರೇಮಕಥೆಗಳಲ್ಲಿ ಅಮಿತಾಭ್ ಬಚ್ಚನ್ ಮತ್ತು ರೇಖಾ ಅವರದು ಅತ್ಯಂತ ವಿವಾದಿತ ಮತ್ತು ಈಗಲೂ ಚರ್ಚೆಯಲ್ಲಿರುವ ಕಥೆ. ಬಾಲಿವುಡ್‌ನಲ್ಲಿ ಎಷ್ಟೋ ರೊಮ್ಯಾಂಟಿಕ್ ಜೋಡಿಗಳು ಬಂದರೂ, ಅಮಿತಾಭ್–ರೇಖಾ ಜೋಡಿಗೆ ಸರಿಸಾಟಿಯಾಗಲು ಸಾಧ್ಯವೇ ಇಲ್ಲ ಎನ್ನುವ ಮಾತೂ ಇದೆ. ಹೀಗೆ ಈ ಜೋಡಿ ಜನಪ್ರಿಯತೆಯ ಉತ್ತುಂಗದಲ್ಲಿ ಇದ್ದಾಗಲೇ ಅಮಿತಾಭ್–ಜಯಾ ಬಾಧುರಿ ಹಸೆಮಣೆ ಏರಿದ್ದು. ಮುಂದೆ ರೇಖಾ ಆರೋಪ, ಅವಮಾನಗಳನ್ನು ಎದುರಿಸಬೇಕಾಯಿತು. ಅಮಿತಾಭ್ ಜತೆ ಮತ್ತೆ ನಟಿಸಲು ಅವಕಾಶ ಸಿಗಲಿಲ್ಲ. ಅನೇಕ ಅಡೆತಡೆಗಳನ್ನು ಎದುರಿಸಬೇಕಾಯಿತು. ರೇಖಾ ಅವರ ಈ ನೋವಿನ ಕಥೆಗಳೆಲ್ಲವೂ ಯಾಸರ್ ಉಸ್ಮಾನ್ ಬರೆದಿರುವ 'ರೇಖಾ, ದಿ ಅನ್‌ಟೋಲ್ಡ್ ಸ್ಟೋರಿ' ಪುಸ್ತಕದಲ್ಲಿ ಅನಾವರಣಗೊಂಡಿದೆ.

1980ರ ಜನವರಿ 22ರಂದು ರಿಶಿ ಕಪೂರ್ ಮತ್ತು ನೀತು ಸಿಂಗ್ ಮದುವೆ ಆರತಕ್ಷತೆ ಕಾರ್ಯಕ್ರಮಕ್ಕೆ ವಿವಾಹಿತೆಯ ಹಾಗೆ ಕಾಣುವಂತೆ ಅಲಂಕಾರ ಮಾಡಿಕೊಂಡಿದ್ದ ರೇಖಾ ಎಲ್ಲರ ಗಮನ ಸೆಳೆದಿದ್ದರು. ಅಲ್ಲಿ ನೆರೆದಿದ್ದ ಅತಿಥಿಗಳು, ಮಾಧ್ಯಮದವರ ಆಕರ್ಷಣೆಯ ಕೇಂದ್ರ ಬಿಂದು ನೀತು ಸಿಂಗ್ ಆಗಿರಲಿಲ್ಲ, ರೇಖಾ ಆಗಿದ್ದರು. ರೇಖಾ ಕದ್ದುಮುಚ್ಚಿ ಮದುವೆ ಆಗಿದ್ದಾರೆಯೇ ಎಂದು ಪತ್ರಕರ್ತರು ಅಚ್ಚರಿಗೊಂಡಿದ್ದರು. ಅದೇ ಸಂತೋಷಕೂಟದಲ್ಲಿ ರೇಖಾ ಎದ್ದು ಹೋಗಿ ಅಮಿತಾಭ್ ಜತೆ ಐದು ನಿಮಿಷ ಮಾತನಾಡಿ ಬಂದಿದ್ದರು. ಈ ಘಟನೆ ಜಯಾ ಬಾಧುರಿ ಅವರನ್ನು ಕೆರಳಿಸಿತ್ತು. ಅಲ್ಲಿಂದ ರೇಖಾ ವಿರುದ್ಧದ ಯುದ್ಧ ಶುರುವಾಗಿದ್ದು. ಆಗ ನಡೆಯುತ್ತಿದ್ದ 'ಮುಖದರ್ ಕ ಸಿಕಂದರ್' ಚಿತ್ರೀಕರಣದ ಬಳಿಕ ಮತ್ತೆ ರೇಖಾ ಜತೆ ಸಿನಿಮಾ ಮಾಡುವಂತಿಲ್ಲ ಎಂದು ಜಯಾ ಕರಾರು ಹಾಕಿದರು. ಅಮಿತಾಭ್ ಕೂಡ ಒಪ್ಪಿಕೊಂಡರು.

'.... ಸಿಕಂದರ್' ಚಿತ್ರದ ವಿಶೇಷ ಪ್ರದರ್ಶನದ ನಡೆದಿತ್ತು. ಸಿನಿಮಾದಲ್ಲಿ ತಮ್ಮಿಬ್ಬರ ಪ್ರೇಮ ಸನ್ನಿವೇಶ ಕಂಡು ಜಯಾ ಕಣ್ಣೀರು ಹಾಕಿದ್ದನ್ನು ರೇಖಾ ಗಮನಿಸಿದ್ದರಂತೆ. ಸಿನಿಮಾ ಮುಗಿದ ಬಳಿಕ ಎಲ್ಲರೂ ತಮ್ಮ ಬಳಿ ಬಂದು, 'ಇದೇ ಕೊನೆಯ ಚಿತ್ರ. ನೀವಿನ್ನು ಅಮಿತಾಭ್ ಜತೆ ನಟಿಸುವಂತಿಲ್ಲ' ಎಂದು ಮಾಹಿತಿ ನೀಡಿದರು. ಆದರೆ ಅಮಿತಾಬ್ ಬಳಿ ಪ್ರಶ್ನಿಸಿದಾಗ, 'ನಾನು ಒಂದೂ ಮಾತು ಆಡುವುದಿಲ್ಲ. ಅದರ ಕುರಿತು ಕೇಳಬೇಡ' ಎಂದು ಪ್ರತಿಕ್ರಿಯಿಸಿದ್ದರು ಎಂಬ ಸಂಗತಿಗಳನ್ನು ರೇಖಾ ಹಂಚಿಕೊಂಡಿದ್ದಾರೆ ಇಲ್ಲಿ.

■ ಅಮಿ


ಏನು ಯೋಚಿಸುತ್ತಿರುವಿರಿ?




ಅಸಲೀ ಅಥವಾ ನಕಲೀ?






ಬೈದ್ಯನಾಥ್

ಮಹಾಭೃಂಗರಾಜ್ ತೈಲ

- ಅಸಲೀ ಭೃಂಗರಾಜ್ ತೈಲವು ಕೂದಲು ಉದುರುವಿಕೆಯನ್ನು ತಡೆಗಟ್ಟಿ ಪುನಃ ಕೂದಲು ಬೆಳೆಯುವಿಕೆಗೆ ಸಹಕಾರಿಯಾಗಿದೆ.
- ಮಂಜಿಷ್ಠಾವು ಉದುರುತ್ತಿರುವ ಕೂದಲಿನ ಆಳಕ್ಕೆ ಹೋಗಿ ಕೂದಲು ಚೆನ್ನಾಗಿ ಬೆಳೆಯಲು ಸಹಕರಿಸುತ್ತದೆ.
- ನಾಗಕೇಶರ, ಹರಿದ್ರಾದಂತಹ 15 ಅಮೂಲ್ಯವಾದ ಗಿಡಮೂಲಿಕೆಗಳಿಂದ ತಯಾರಾದ ಈ ತೈಲವು ಕೂದಲನ್ನು ಕಪ್ಪು, ದೃಢ ಮತ್ತು ಹೊಳೆಯುವಂತೆ ಮಾಡುವಲ್ಲಿ ಸಹಕಾರಿಯಾಗಿದೆ.
- ಕೂದಲು ಉದುರುವಿಕೆ ಚಿಂತೆಯಿಂದ ನಿಮ್ಮನ್ನು ದೂರಗೊಳಿಸುತ್ತದೆ.
- ಕೂದಲಿನ ಸಂಪೂರ್ಣ ಪೋಷಣೆಗಾಗಿ ಇರುವ ಒಂದು ಅಸಲೀ, ಮತ್ತು ಪರಿಶುದ್ಧ ಆಯುರ್ವೇದಿಕ್ ಔಷಧಿ.

Customer Care : 080-26716012, 26716040